

ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಾರೆ. ಆದರೆ ಯಾರೂ ಸಹಾಯಕ್ಕೆ ಬರುವುದಿಲ್ಲ. ಮನೆಯ ಕೆಲಸದವಳು ಸಹ ಉಪಯೋಗವಿಲ್ಲ. ಅವಳಿಂದ ಸಹ ಏನೂ ಸಾಧ್ಯವಿಲ್ಲ. ಆದರೂ ಕೆಲಸದವಳಿಗೆ, 'ನೀನೇನಾದರು ಮಾಡು' ಎಂದಾಗ ಕೆಲಸದವಳು, 'ನಾನೇನು ಮಾಡ್ಲಿ? ನನಗಂತೂ ಏನೂ ಗೊತ್ತಿಲ್ಲ' ಎನ್ನುತ್ತಾಳೆ.

ಈಗ ದಾಸ್ ಬಾಬೂ ಅವರ ಹೆಂಡತಿ ಮನೆಯಿಂದ ಹೊರಗೆ ಬರುತ್ತಾಳೆ. ತನ್ನ ಪತಿ ಇನ್ನೂ ಹಾಗೆಯೇ ಮಲಗಿರುವುದನ್ನು ನೋಡುತ್ತಾಳೆ. ಅವರು ಎದ್ದು ಕೂರುವ ಲಕ್ಷಣಗಳು ಕಾಣ ಬರುತ್ತಿಲ್ಲ. ಅವಳ ಹೃದಯದ ಬಡಿತ ಹೆಚ್ಚುತ್ತದೆ. ಇವರು ಇಹಲೋಕವನ್ನೇ ತ್ಯಜಿಸಿದರೆ!

ದಾಸ್ ಬಾಬೂ ಅವರ ಹೆಂಡತಿ ಪತಿಯ ಗಲ್ಲದ ಮೇಲೆ ಕೈಯಿಟ್ಟು ಪರೀಕ್ಷಿಸುತ್ತಾಳೆ, ಶರೀರವನ್ನು ಮುಟ್ಟಿ ನೋಡುತ್ತಾಳೆ. ಮೂಗಿನ ಕೆಳಗೆ ಬೆರಳನ್ನಿಡುತ್ತಾಳೆ. ಇವರು ಸತ್ತಿಲ್ಲ. ಉಸಿರಾಡುತ್ತಿದ್ದಾರೆ. ಅವಳು ನಿಶ್ಚಿಂತಳಾಗುತ್ತಾಳೆ. ಇನ್ನು ಸ್ವಲ್ಪ ಹೊತ್ತಿಗೆ ಸುಧಾರಿಸಿಕೊಂಡು ಒಳಗೆ ಬರುತ್ತಾರೆ ಎಂದು ಯೋಚಿಸಿ, ಅಲ್ಲಿ ನಿಲ್ಲದೆ ಮನೆಯೊಳಗೆ ಹೋಗುತ್ತಾಳೆ.

ಸಂಜೆಯಾಗುತ್ತದೆ. ದಾಸ್ ಬಾಬೂ ಮೆಲ್ಲ-ಮೆಲ್ಲನೆ ಸುಧಾರಿಸಿಕೊಳ್ಳುತ್ತಿದ್ದಾರೆ. ಆದರೆ ಶರೀರದಲ್ಲಿ ಇನ್ನೂ